◆ **ಬೆಂಗಳೂರಿನವರಾದ ನಿಮಗೆ ಬಾಲಿವುಡ್ ನಂಟು ಹೇಗೆ?**

ಕಾಲೇಜು ಸಮಯದಲ್ಲಿ ರಾಜ್‌ಕುಮಾರ್, ಅಮಿತಾಭ್ ಬಚ್ಚನ್, ರಜನಿಕಾಂತ್, ವಿಷ್ಣುವರ್ಧನ್, ಚಿರಂಜೀವಿ ಅವರ ಸಿನಿಮಾಗಳನ್ನು ಮೊದಲ ದಿನ ಮೊದಲ ಶೋ ನೋಡುತ್ತಿದ್ದ ಸಿನಿಮಾ ಅಭಿಮಾನಿ ನಾನು. ಬೆಳಬೆಳಿಗ್ಗೆ ಟಿಕೆಟ್‌ಗಾಗಿ ಕ್ಯೂ ನಿಂತು ಜಗಳ ಮಾಡಿ ಟಿಕೆಟ್ ಪಡೆಯುತ್ತಿದ್ದೆ. ಕೆಲವೊಮ್ಮೆ ಜಗಳದಲ್ಲಿ ಬಟ್ಟೆ ಹರಿದು, ಕೈಗೆ ಗಾಯ ಆಗಿದ್ದೂ ಇದೆ. ಬೆಳಗ್ಗೆ 6 ಗಂಟೆಗೆ ಜಾಗಿಂಗ್, ಓದೋಕೆ ಅಂತೆಲ್ಲ ಸುಳ್ಳು ಹೇಳಿ ಸಿನಿಮಾಗೆ ಹೋಗುತ್ತಿದ್ದೆ. ಶುಕ್ರವಾರ ಕಾಲೇಜ್ ಬಂಕ್.

ಕ್ರೈಸ್ಟ್ ಕಾಲೇಜಿನಲ್ಲಿ ಪಿಯುಸಿ ಓದಿದೆ. ಆರ್.ವಿ. ಕಾಲೇಜಿನಲ್ಲಿ ಎಂಜಿನಿಯರಿಂಗ್ ಮುಗಿಸಿದೆ. ಮಾರ್ಕೆಟಿಂಗ್ ಕೆಲಸಕ್ಕೆ ಸೇರಿಕೊಂಡೆ. ಎರಡು–ಮೂರು ವರ್ಷದಲ್ಲಿ ಕೆಲಸ ಬೋರಿಂಗ್ ಎನಿಸಿತು. ಹಾಗಾಗಿ ಪ್ರಕಾಶ್ ಬೆಳವಾಡಿ ಅವರ 'ಸೆಂಟರ್ ಫಾರ್ ಫಿಲ್ಮ್ ಅಂಡ್ ಡ್ರಾಮಾ'ಕ್ಕೆ ಸೇರಿಕೊಂಡೆ. ಅಲ್ಲಿ ಎರಡು ವರ್ಷ ಇದ್ದೆ. ನನ್ನ ಸ್ನೇಹಿತರೊಬ್ಬರು ಬಾಲಿವುಡ್ ನಿರ್ದೇಶಕ ಆರ್. ಭಾಲ್ಕಿ ಅವರೊಂದಿಗೆ ಕ್ಲೋಸ್ ಆಗಿದ್ದರು. ಅವರ ಮೂಲಕ ಭಾಲ್ಕಿ ಸರ್ ಅವರನ್ನು ಭೇಟಿ ಮಾಡಿದೆ. ಅವರ ಜೊತೆ ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಸೇರಿಕೊಂಡೆ.

ತೀರಿಕೊಂಡರು. ಅನಂತರ ವಿದ್ಯಾ ಬಾಲನ್ ಅವರನ್ನು ಕೇಳಿದೆ. ಅವರ ಜೊತೆ 'ಪಾ' ಸಿನಿಮಾದಲ್ಲಿ ಕೆಲಸ ಮಾಡಿದ್ದೆ. ಸೋನಾಕ್ಷಿ ಸಿನ್ಹಾ ಅವರೂ ಪರಿಚಯ. ಎಲ್ಲರೂ ಕತೆ ಕೇಳಿದಾಕ್ಷಣ ಒಪ್ಪಿಕೊಂಡರು.

◆ **ಕನ್ನಡದ ಹಿರಿಯ ನಟ ದತ್ತಣ್ಣ ಅವರೂ ಈ ಚಿತ್ರದಲ್ಲಿ ನಟಿಸಿದ್ದಾರೆ...**

ಪ್ರಕಾಶ್ ಬೆಳವಾಡಿಯವರ ಸಿನಿಮಾವೊಂದರಲ್ಲಿ ದತ್ತಣ್ಣ ಅಭಿನಯಿಸಿದ್ದರು. ಆಗಲೇ ಅವರ ಪರಿಚಯವಾಗಿತ್ತು. ಅವರ 'ನೀರ್‌ದೋಸೆ' ಸಿನಿಮಾ ನೋಡಿದ್ದೆ. ದತ್ತಣ್ಣ ಅವರು ಹಿರಿಯ ನಟರಾದರೂ ತುಂಬ ಸರಳ ವ್ಯಕ್ತಿ. ನನ್ನ ಪಾತ್ರಕ್ಕೂ ಅವರು ಸೂಟ್ ಆಗಿದ್ದರು. ನಿತ್ಯಾ ಮೆನನ್ ಅವರ ಸಿನಿಮಾಗಳನ್ನು ನೋಡಿದ್ದೆ. ಕತೆ ಹೇಳಿದಾಗ ಅವರೂ ಒಪ್ಪಿಕೊಂಡರು. ಇದರಲ್ಲಿ ನಟನೆ ಮಾಡಿದವರೆಲ್ಲ ಖ್ಯಾತ ನಟ–ನಟಿಯರು. ಅವರೆಲ್ಲರೂ ಒಪ್ಪಿಕೊಂಡು ನಟಿಸಿದ್ದಾರೆ ಎಂದರೆ ಚಿತ್ರಕತೆ ಚೆನ್ನಾಗಿದೆ, ಅದರಲ್ಲಿ ಏನೋ ಶಕ್ತಿಯಿದೆ ಎಂದರ್ಥ ಅಲ್ಲವೇ?

◆ **ಪಾತ್ರಕ್ಕೆ ಕಲಾವಿದರನ್ನು ಹೇಗೆ ಅಣಿಗೊಳಿಸಿದಿರಿ?**

ನಾನು ಇಸ್ರೊ ವಿಜ್ಞಾನಿಗಳ ಸಂದರ್ಶನ ಮಾಡಿ ಒಂದು ಡಾಕ್ಯುಮೆಂಟರಿ ಸಿದ್ಧಪಡಿಸಿದ್ದೆ. ಅದನ್ನು ಎಲ್ಲರಿಗೂ ಕೊಟ್ಟೆ. ಹಾಗೇ ಕತೆಯನ್ನು ವಿವರಿಸಿ, ಸ್ಕ್ರಿಪ್ಟ್ ರೆಡಿ ಮಾಡಿಕೊಟ್ಟಿದ್ದೆ. ಎಲ್ಲರೂ ಅದನ್ನು ಓದಿ ಚೆನ್ನಾಗಿ ತಯಾರಿ ಮಾಡಿಕೊಂಡರು. ವಿದ್ಯಾ ಬಾಲನ್ ಅವರು ನನ್ನ ಅಕ್ಕ ಸುಜಾತಾ ಕೃಷ್ಣನ್ ಅವರಿಂದ ಆಗಾಗ ಟಿಪ್ಸ್ ತೆಗೆದುಕೊಳ್ಳುತ್ತಿದ್ದರು.

◆ **ಅಸಿಸ್ಟೆಂಟ್ ಡೈರೆಕ್ಟರ್ ಆಗಿ ಕೆಲಸ ಮಾಡಿದ ಅನುಭವ ಹೇಗಿತ್ತು?**

ಅಮಿತಾಭ್ ಅವರ ಸಿನಿಮಾ ಟಿಕೆಟ್ ಸಿಗುವಷ್ಟರಲ್ಲಿ ನನ್ನ ಕೈಗಳ ಮೇಲೆ ಗಾಯದ ಮಾರ್ಕ್‌ಗಳಿರುತ್ತಿದ್ದವು. ಮುಂಬೈಗೆ ಬಂದ ಮೇಲೆ ಆರ್. ಭಾಲ್ಕಿ ಅವರ 'ಚೀನಿ ಕಮ್'ನಲ್ಲಿ ಕೆಲಸ ಮಾಡುತ್ತಿದ್ದೆ. ಅಮಿತಾಭ್ ಬಚ್ಚನ್ ಅವರು ಸಿನಿಮಾದ ಶೂಟಿಂಗ್‌ಗೆ ನಡೆದುಕೊಂಡು ಬರುತ್ತಿದ್ದರು. ಅವರನ್ನು ಎದುರು ನೋಡುತ್ತಿರುವುದು ಅದೇ ಮೊದಲ ಬಾರಿ. ಎಷ್ಟು ಥ್ರಿಲ್ ಆಗಿದ್ದೇ ಎಂದರೆ ಈಗಲೂ ಆ ಕ್ಷಣ ನನಗೆ ನನಪಿದೆ. ಅನಂತರ ಭಾಲ್ಕಿ ಅವರ ಜೊತೆ ಐದಾರು ಸಿನಿಮಾಗಳಲ್ಲಿ ಕೆಲಸ ಮಾಡಿದ್ದೇನೆ. ಆ್ಯಕ್ಷನ್ ಚಿತ್ರಗಳ ಬಗ್ಗೆ ತಿಳಿದುಕೊಳ್ಳಲು ಎ.ಆರ್. ಮುರುಗದಾಸ್ ಅವರ ಜೊತೆ 'ಹಾಲಿಡೇ'ಯಲ್ಲಿ ಕೆಲಸ ಮಾಡಿದೆ. ಸಿನಿಮಾ ನನ್ನ ಫ್ಯಾಷನ್, ಪ್ಯಾಶನ್ ಎಲ್ಲ. ಹಾಗಾಗಿ ಈ ಏಳೆಂಟು ವರ್ಷಗಳಲ್ಲಿ ಎಷ್ಟೇ ಕಷ್ಟ ಬಂದರೂ ಅಲ್ಲಿಂದ ಹಿಂದೆ ಸರಿದಿಲ್ಲ.

◆ **ಬೆಂಗಳೂರಿನ ಬಗ್ಗೆ ಹೇಳಿ.**

ಬೆಂಗಳೂರಿನ ಹಲಸೂರಿನ ಬಜಾರ್ ಸ್ಟ್ರೀಟ್‌ನಲ್ಲಿ ನಾನು ಹುಟ್ಟಿ ಬೆಳೆದಿದ್ದು. ಈಗಲೂ ಪ್ರತಿ ಭಾನುವಾರ ಅಥವಾ ವಾರಕ್ಕೆ ಎರಡು ದಿನ ಬೆಂಗಳೂರಿಗೆ ಬರುತ್ತೇನೆ. ಇಲ್ಲಿಗೇ ಬರದೇ ಇದ್ರೇ ಉಸಿರು ಕಟ್ಟುತ್ತೆ.

◆ **ಸಿನಿಮಾ ಕುರಿತು ನಿಮ್ಮ ನಿರೀಕ್ಷೆ ಏನಿತ್ತು?**

ಇದು ಬಾಹ್ಯಾಕಾಶದ ಕುರಿತ ಸಿನಿಮಾ ಆಗಿದ್ದರಿಂದ ಮಕ್ಕಳು ಹಾಗೂ ಆಸಕ್ತರು ಸ್ಪೇಸ್ ತಂತ್ರಜ್ಞಾನದಲ್ಲಿ ಆಸಕ್ತಿ ಹೊಂದಬಹುದು. ಇನ್ನು ಕೆಲವರಿಗೆ ಮಂಗಳ ಯಾನದ ಹಿಂದಿನ ಶ್ರಮ ಗೊತ್ತಿರುವುದಿಲ್ಲ. ಈ ಸಿನಿಮಾದಲ್ಲಿ ಸ್ವಲ್ಪ ಡ್ರಾಮಾಟಿಕ್ ಆಗಿ ಅದನ್ನು ತೋರಿಸಿದ್ದೇವೆ. ಹಾಲಿವುಡ್‌ನಲ್ಲಿ ಬಾಹ್ಯಾಕಾಶಕ್ಕೆ ಸಂಬಂಧಿಸಿದ ಸಿನಿಮಾಗಳು ಕಡಿಮೆ. ಇನ್ನು ಈ ರೀತಿಯ ಸಿನಿಮಾ ಹೆಚ್ಚಾಗಬಹುದು.

◆ **ನಿಮ್ಮ ಮುಂದಿನ ಸಿನಿಮಾ?**

ತಮಿಳಿನ 'ಕತ್ತಿ'ಯನ್ನು ಹಿಂದಿಯಲ್ಲಿ ರೀಮೇಕ್ ಮಾಡ್ತಿದ್ದೀನಿ. ಅದರ ಕೆಲಸಗಳಿನ್ನೂ ಆರಂಭಿಕ ಹಂತದಲ್ಲಿದೆ. ಅಕ್ಷಯ್ ಅವರಿಗೆ ನಾನು 'ಮಿಷನ್ ಮಂಗಲ್' ಸೆಟ್‌ನಲ್ಲೇ 'ಕತ್ತಿ'ಯ ಕತೆ ಹೇಳಿದೆ. ಖುಷಿಯಿಂದ ಒಪ್ಪಿಕೊಂಡಿದ್ದಾರೆ. ■



'ಮಿಷನ್ ಮಂಗಲ್' ಸಿನಿಮಾದ ದೃಶ್ಯ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65